ದಿನಾಂಕಃ 10-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರವಾಗಿ ಶ್ರೀ.ಬಿ.ಹೆಚ್.ಪಿ. ವಕೀಲರಿಂದಃ-**

ರಾಮಕೃಷ್ಣೇಗೌಡ ಮತ್ತು 1 ನೇ ಪ್ರತಿವಾದಿ ಅಣ್ಣ ತಮ್ಮಂದಿರು. ರಾಮಕೃಷ್ಣೇಗೌಡರವರಿಗೆ ಮಕ್ಕಳುಗಳು ಇರುವುದಿಲ್ಲ. 1 ನೇ ಪ್ರತಿವಾದಿ ನಾನು ಮತ್ತು ವಾದಿ ಮಕ್ಕಳುಗಳಾಗಿರುತ್ತೇವೆ. ರಾಮಕೃಷ್ಣೇಗೌಡರವರಿಗೆ ಮಕ್ಕಳುಗಳು ಇಲ್ಲದೇ ಇರುವುದರಿಂದ ನನ್ನನ್ನು ದತ್ತು ಪಡೆದುಕೊಂಡಿದ್ದರು ಎಂದರೆ ಸರಿ. ರಾಮಕೃಷ್ಣೇಗೌಡರು ಮೃತಪಟ್ಟ ನಂತರ ಅವರಿಗೆ ಸಂಬಂಧಪಟ್ಟ ಎಲ್ಲಾ ಆಸ್ತಿಗಳನ್ನು ನಾನೇ ಅನುಭವಿಸುತ್ತಿದ್ದೇನೆ ಎಂದರೆ ಸರಿ. ದಾವಾ ಐಟಂ ನಂ.1 ರ ಆಸ್ತಿ ನನ್ನ ತಂದೆ ರಾಮಕೃಷ್ಣೇಗೌಡರವರಿಂದ ಖರೀದಿಸಿದ ಆಸ್ತಿ ಆಗಿರುತ್ತದೆ. ಆ ಕಾರಣ ಈ ಆಸ್ತಿ ನನ್ನ ತಂದೆಯ ಸ್ವಯಾರ್ಜಿತವಾದ ಆಸ್ತಿ ಆಗಿರುತ್ತದೆ ಎಂದರೆ ಸರಿ. ದಾವಾ ಐಟಂ ನಂ.2 ರ ಆಸ್ತಿಯನ್ನು 1 ನೇ ಪ್ರತಿವಾದಿ ವಕೀಲರಾದ ಬಸವರಾಜುರವರಿಂದ ಖರೀದಿಸಿದ ಆಸ್ತಿಯಾಗಿರುತ್ತದೆ. ದಾವಾ ಐಟಂ ನಂ.1 ಮತ್ತು 2 ರ ಆಸ್ತಿಗಳನ್ನು 1 ನೇ ಪ್ರತಿವಾದಿ ತನ್ನ ಸ್ವಂತ ಹಣದಿಂದ ಖರೀದಿಸಿದ್ದು, ಆ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. ದಾವಾ ಐಟಂ ನಂ.1 ಮತ್ತು 2 ರ ಆಸ್ತಿಗಳು 1 ನೇ ಪ್ರತಿವಾದಿ ದಾನ ಪತ್ರದ ಮೂಲಕ 2 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿ. ಈ ಎರಡೂ ಆಸ್ತಿಗಳು 2 ನೇ ಪ್ರತಿವಾದಿಯ ಸ್ವಾಧೀನಾನುಭವದಲ್ಲಿವೆ ಎಂದರೆ ಸರಿ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ